ಕರ್ನಾಟಕ ಸರ್ಕಾರ
(ತಾಂತ್ರಿಕ ಶಿಕ್ಷಣ ಇಲಾಖೆ)

ಸಂಖ್ಯೆ:ಬಿಟಿಇ 01 ಇಎಪಿ 2017

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ,
ಅರಮನೆ ರಸ್ತೆ, ಬೆಂಗಳೂರು-01,
ದಿನಾಂಕ:17/07/2017.

## ಸುತ್ತೋಲೆ

ವಿಷಯ: ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ನಡೆಸುವ 2017 ರ ನವೆಂಬರ್/ಡಿಸೆಂಬರ್ ಸೆಮಿಸ್ಟರ್ ಪರೀಕ್ಷೆಗೆ ಪರೀಕ್ಷಾ ಶುಲ್ಕ ಪಾವತಿಸಲು ದಿನಾಂಕಗಳ ಮಾರ್ಪಾಡು ಕುರಿತು.
ಉಲ್ಲೇಖ: ಈ ಕಛೇರಿ ಅಧಿಸೂಚನೆ ಸಂ:ಬಿಟಿಇ:01:ಇಎಪಿ:2017, ದಿನಾಂಕ:19/06/2017.

*****

ಉಲ್ಲೇಖದಲ್ಲಿ ಕಾಣಿಸಿರುವ ಈ ಕಛೇರಿಯ ಅಧಿಸೂಚನೆಯಲ್ಲಿ 2017 ರ ನವೆಂಬರ್/ಡಿಸೆಂಬರ್ ಸೆಮಿಸ್ಟರ್ ಪರೀಕ್ಷೆಗೆ ಪರೀಕ್ಷಾ ಶುಲ್ಕ ಪಾವತಿಸಲು ದಿನಾಂಕಗಳನ್ನು ನೀಡಲಾಗಿತ್ತು. ಆದರೆ ಇನ್ನೂ ಪ್ರಥಮ ಸೆಮಿಸ್ಟರ್‌ನ ಪ್ರವೇಶ ಪ್ರಕ್ರಿಯೆ ಮುಗಿಯದಿರುವುದರಿಂದ ಹಾಗೂ 2017 ರ ಏಪ್ರಿಲ್/ಮೇ ಪರೀಕ್ಷೆಯ ಮರುಮೌಲ್ಯಮಾಪನದಲ್ಲಿ ಕೆಲವೊಂದು ವಿದ್ಯಾರ್ಥಿಗಳು ಕೆಲವೊಂದು ವಿಷಯಗಳಲ್ಲಿ ಉತ್ತೀರ್ಣರಾಗಿ ಮುಂದಿನ ಸೆಮಿಸ್ಟರ್‌ಗೆ ಅಂದರೆ ಮೂರು ಮತ್ತು ಐದನೇ ಸೆಮಿಸ್ಟರ್‌ಗಳಿಗೆ ಪ್ರವೇಶ ಪಡೆಯಲು ಅರ್ಹತೆ ಪಡೆದಿರುತ್ತಾರೆ. ಕಾರಣ ಈಗಾಗಲೇ ಉಲ್ಲೇಖದಲ್ಲಿ ಕಾಣಿಸಿರುವ ಈ ಕಛೇರಿ ಅಧಿಸೂಚನೆಯಲ್ಲಿನ ಪರೀಕ್ಷಾ ಶುಲ್ಕ ಪಾವತಿಸುವ ದಿನಾಂಕಗಳನ್ನು ಮಾರ್ಪಾಡು ಮಾಡಿ ಈ ಕೆಳಕಂಡಂತೆ ನೀಡಲಾಗಿದೆ. ಈ ಪರಿಷ್ಕೃತ ಪರೀಕ್ಷಾ ಶುಲ್ಕ ಪಾವತಿಸುವ ದಿನಾಂಕಗಳು ಕೇವಲ ಮರುಮೌಲ್ಯಮಾಪನದಲ್ಲಿ ಉತ್ತೀರ್ಣರಾಗಿ ಮುಂದಿನ ತರಗತಿಗಳಿಗೆ ಪ್ರವೇಶ ಪಡೆಯಲು ಅರ್ಹರಾಗಿರುವ ಮತ್ತು ಪ್ರಥಮ ಸೆಮಿಸ್ಟರ್‌ಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತವಾಗಿರದೆ, ಎಲ್ಲಾ ವಿದ್ಯಾರ್ಥಿಗಳಿಗ ಅನ್ವಯವಾಗುವುದು.

E-Gov 18/7/17

ಸಂಸ್ಥೆಯಲ್ಲಿ ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ಮತ್ತು ಪರೀಕ್ಷಾ ಶುಲ್ಕ ಪಾವತಿಸಲು ವಿವರ:-
ದಂಡರಹಿತ

ಎ) ದಿನಾಂಕ:10/08/2017 ರವರೆಗೆ ದಂಡರಹಿತವಾಗಿ.

ದಂಡ ಸಹಿತ

ಬಿ) ಮೊದಲನೇ ಹಂತ ದಿನಾಂಕ:11/08/2017 ರಿಂದ 17/08/2017 ರವರೆಗೆ (ಎರಡೂ ದಿನಗಳು ಸೇರಿ) ರೂ.50-00 (ರೂಪಾಯಿ ಐವತ್ತು ಮಾತ್ರ) ದಂಡ ಶುಲ್ಕದೊಡನೆ ಪ್ರತಿ ಸೆಮಿಸ್ಟರ್ ಪರೀಕ್ಷೆಗೆ.

ಸಿ) ಎರಡನೇ ಹಂತ ದಿನಾಂಕ:18/08/2017 ರಿಂದ 24/08/2017 ರವರೆಗೆ (ಎರಡೂ ದಿನ ಸೇರಿ) ರೂ.100-00 (ರೂಪಾಯಿ ನೂರು ಮಾತ್ರ) ದಂಡ ಶುಲ್ಕದೊಡನೆ ಪ್ರತಿ ಸೆಮಿಸ್ಟರ್ ಪರೀಕ್ಷೆಗೆ.

ಡಿ)ಮೂರನೇ ಹಂತ ದಿನಾಂಕ:25/08/2017 ರಿಂದ 31/08/2017 ರವರೆಗೆ (ಎರಡೂ ದಿನ ಸೇರಿ) ರೂ.200-00 (ರೂಪಾಯಿ ಇನ್ನೂರು ಮಾತ್ರ) ದಂಡ ಶುಲ್ಕದೊಡನೆ ಪ್ರತಿ ಸೆಮಿಸ್ಟರ್ ಪರೀಕ್ಷೆಗೆ.

eap sv

ಇ) ನಾಲ್ಕನೇ ಹಂತ ದಿನಾಂಕ:01/09/2017 ರಿಂದ 07/09/2017 ರವರೆಗೆ (ಎರಡೂ ದಿನ ಸೇರಿ) ರೂ.400-00 (ರೂಪಾಯಿ ನಾಲ್ಕು ನೂರು ಮಾತ್ರ) ದಂಡ ಶುಲ್ಕದೊಡನೆ ಪ್ರತಿ ಸೆಮಿಸ್ಟರ್ ಪರೀಕ್ಷೆಗೆ.

ಎಫ್) ದಿನಾಂಕ:08/09/2017 ರಿಂದ ಪರೀಕ್ಷೆ ಪ್ರಾರಂಭವಾಗುವ 15 ದಿನಗಳ ಮೊದಲು ರೂ.2000-00(ರೂಪಾಯಿ ಎರಡು ಸಾವಿರ ಮಾತ್ರ) ವಿಶೇಷ ದಂಡ ಶುಲ್ಕದೊಡನೆ ಪ್ರತಿ ಸೆಮಿಸ್ಟರ್ ಪರೀಕ್ಷೆಗೆ(ಈಶುಲ್ಕ ಪಾವತಿಸುವ ಮುನ್ನ ನಿರ್ದೇಶಕರು/ಕಾರ್ಯದರ್ಶಿ, ಇವರಿಂದ ಲಿಖಿತ ಅನುಮತಿ ಪಡೆಯತಕ್ಕದ್ದು. ವಿಶೇಷ ಶುಲ್ಕ ಪಾವತಿಸಲು ವಿದ್ಯಾರ್ಥಿಯು ತನ್ನ ಅರ್ಜಿಯನ್ನು ಸಂಸ್ಥೆಯ ಪ್ರಾಚಾರ್ಯರ ಮುಖಾಂತರ ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ಇವರಿಗೆ ಸಲ್ಲಿಸತಕ್ಕದ್ದು. ವಿಶೇಷ ದಂಡ ಶುಲ್ಕ ಪಾವತಿಸುವ ವಿದ್ಯಾರ್ಥಿಯು ಅರ್ಜಿಯ ಜೊತೆಯಲ್ಲಿ ತನ್ನ ಸಂಪೂರ್ಣ ಹಾಜರಾತಿ ಮಾಹಿತಿ ಹಾಗೂ ಎಲ್ಲಾ ಪರೀಕ್ಷೆಗಳ ಅಂಕಪಟ್ಟಿಗಳ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಲು ತಿಳಿಸಲಾಗಿದೆ.)

ಉಳಿದಂತೆ ಉಲ್ಲೇಖದಲ್ಲಿ ಕಾಣಿಸಿರುವ ಈ ಕಛೇರಿಯ ಅಧಿಸೂಚನೆಯನ್ನು ಪಾಲಿಸುವುದು.

ಕಾರ್ಯದರ್ಶಿ.

ಇವರಿಗೆ,

ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ – ಮಾಹಿತಿಗಾಗಿ (ಈ ಪರಿಷ್ಕೃತ ಪರೀಕ್ಷಾ ಶುಲ್ಕ ಪಾವತಿಸುವ ದಿನಾಂಕಗಳನ್ನು ಸಂಸ್ಥೆಯ ವಿದ್ಯಾರ್ಥಿಗಳ ಸೂಚನಾ ಫಲಕದಲ್ಲಿ ಪ್ರಕಟಿಸಲು)

ಪ್ರತಿ:

1) ಉಪ ನಿರ್ದೇಶಕರು (ಪರೀಕ್ಷೆ)
2) ಸಹಾಯಕ ನಿರ್ದೇಶಕರು (ಪರೀಕ್ಷೆ)
3) ಸಹಾಯಕ ನಿರ್ದೇಶಕರು (ತಾಂತ್ರಿಕ)
4) ಆಪ್ತ ಶಾಖೆ, ನಿರ್ದೇಶಕರ ಕಛೇರಿ, ನಿರ್ದೇಶನಾಲಯ, ಬೆಂಗಳೂರು.
5) ಆಡಳಿತಾಧಿಕಾರಿಯವರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
6) ಸಹಾಯಕ ಆಡಳಿತಾಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
7) ಆಪ್ತ ಶಾಖೆ (ಪರೀಕ್ಷೆ)
8) ರಿಜಿಸ್ಟ್ರಾರ್ (ಪರೀಕ್ಷೆ)
9) ಅಧೀಕ್ಷಕರು ಆರ್.ಡಿ.ಎಂ.(1) ರಿಂದ (15)
10) ಇಸಿಎಸ್/ಇಎಫ್‌ಎಸ್/ಇಆರ್‌ಎಸ್,ಮುಂದಿನ ಕ್ರಮಕ್ಕಾಗಿ.
11) ಇ-ಗವರ್ನೆನ್ಸ್ ವಿಭಾಗಕ್ಕೆ (ವೆಬ್‌ಸೈಟ್‌ನಲ್ಲಿ ಪ್ರಕಟಿಸಲು)
12) ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
13) ಗಣಕ ಕೇಂದ್ರ – ಬಿಟಿಇ ಲಿಂಕ್ಸ್ ವೆಬ್-ಪೋರ್ಟಲ್‌ನಲ್ಲಿ ಪ್ರಕಟಿಸಲು.
14) ಕಛೇರಿ ಪ್ರತಿ.

eap sv